As required by Rule 114 of the Rules of procedure and Conduct of Business in the Karnataka Legislative Council, I send herewith Karnataka Educational Institutions (Prohibition of Capitation fee) Bill 1984 which has been agreed to by the Legislative Council without amendments.

Legislative Business

The Karnataka Co-operative Societies (Amendment) Bill 1984
Leave to Interduce

Sri R. L. Jalappa (Hon. Minister for Co-operation) --Sir, I beg to move :

"That leave be granted to introduce the Karnataka Co-operative Societies (Amendment) Bill 1984."

Mr. Speaker.--Motion moved. Now, I will put the motion to vote : The question is :

"That leave be granted to introduce the Karnataka Co-operative Societies (Amendment) Bill 1984"

The motion was adopted and leave was granted

Sri. R. L. Jalappa--Sir. I introduce ;

"The Karnataka Co-operative Societies (Amendent) Bill 1984."

Annexure Mr. Speaker.--The Bill is introduced.

ಶ್ರೀ ಕೆ. ಧನಂಜಯ ಕುಮಾರ್.—ದಯವಿಟ್ಟು ಈ ಮಸೂದೆಯನ್ನು ಸೋಮವಾರ ತೆಗೆದು ಕೊಳ್ಳಬೇಕು

ಅಧ್ಯಕ್ಷರು.--ಇದು ಆರ್ಡಿನೆನ್ಸ್ ರಿಪ್ಲೇಕೆಸ್ ಮಾಡುವ ಬಿಲ್ ಆದ್ದರಿಂದ ಇದನ್ನು ಈಗಲೇ ತೆಗೆದು ಕೊಳ್ಳಬೇಕು ಆರ್ಡಿನೆನ್ಸ್ ಹೊರಡಿಸಿದಾಗಲೇ ಇದರ ಕಾಪಿಗಳು ನಿಮಗೆ ಬಂದಿರುತ್ತವೆ. ಆರ್ಡಿನೆನ್ಸ್ ಲ್ಯಾಪ್ಸ್ ಆಗುತ್ತದೆ ಎನ್ನುವ ಆಬ್ಜೆಕ್ಷನ್ಸ್ ಗೋಸ್ಕರ ತಂದಿದ್ದಾರೆ.

ಶ್ರೀ ಧನಂಜಯಕುಮಾರ್.--ಬಿಲ್ ಇಂಟ್ರೋಡ್ಯೂಸ್ ಮಾಡದೇ ಇದ್ದರೆ ಲ್ಯಾಪ್ಸ್ ಆಗುವ ಪ್ರಶ್ನೆ ಯಿಲ್ಲ.

10-30 A.M.

ಶ್ರೀ ಎಸ್. ಬಂಗಾರಪ್ಪ —ಇದು ಆರ್ಡಿನೆನ್ಸ್ ರಿಪ್ಲೇಸಿಂಗ್ ಬಿಲ್ ಸರಿ. ಮೊದಲೇ ಆರ್ಡಿನೆನ್ಸ್ ಕಾಪಿಗಳು ಬಂದಿರುತ್ತವೆ ನಿಜ. ಅದರೆ ಇದನ್ನು ಯಾವಾಗ ತೆಗೆದುಕೊಳ್ಳುತ್ತಾರೆಂದು ಗೊತ್ತಿರುವುದಿಲ್ಲ. ಆರ್ಡಿನೆನ್ಸ್ ಪ್ರತಿಯನ್ನು ಹುಡುಕುವುದಕ್ಕೆ ಆಗುವುದಿಲ್ಲ. ಶಾಸಕರ ಪರಿಸ್ಥಿತಿ ಏನು, ಅವರೆ ತೊಂದರೆ ಏನು ಎಂಬುದು ತಮಗೆ ಗೊತ್ತಿದೆ ಅರ್ಧಗಂಟೆಗೆ ಮುಂದೆ ಪ್ರತಿಗಳನ್ನು ಕಳಿಸಿದ್ದಾರೆ. ಇದು ಒಳ್ಳೆಯ ಸಂಪ್ರದಾಯ ಅಲ್ಲ. ನಾವಿದನ್ನು ಓದಬೇಕು, ಅಭ್ಯಾಸ ಮಾಡಬೇಕು. ಇದಕ್ಕೆ ಸಮಯ ಬೇಕಾಗುತ್ತದೆ. ಇಲ್ಲದೇ ಹೋದರೆ ಯಾರೂ ಇದನ್ನು ಅಭ್ಯಾಸ ಮಾಡುವುದಕ್ಕೆ ಸಾಧ್ಯ ಇರುವುದಿಲ್ಲ. ಆದ್ದರಿಂದ ಇದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಆರ್ ಎಲ್. ಜಾಲಪ್ಪ --ಈಗಾಗಲೇ ಪ್ರತಿಯೊಂದು ಅಂಶವೂ ನಮ್ಮ ಸದಸ್ಯರಿಗೆ ಗೊತ್ತಿದೆ. ಬಹಳ ಚಿಕ್ಕ ತಿದ್ದುಪಡಿಗಳನ್ನು ತಂದಿದ್ದೇನೆ. ಬೇಕಾದರೆ ಪ್ರತಿಯೊಂದು ಕ್ಲಾಸನ್ನೂ ನಾನು ವಿವರಿಸುತ್ತೇನೆ. ಸೋಮವಾರ ಇದು ಕೌನ್ಸಿಲ್‌ನಲ್ಲಿ ಪಾಸ್ ಆಗದೇಹೋದರೆ ಇದು ಲ್ಯಾಪ್ಸ್ ಆಗುತ್ತದೆ. ಸೋಮವಾರವೇ ಕೊನೆಯ ದಿವಸ.

ಶ್ರೀ ಎಸ್. ಬಂಗಾರಪ್ಪ.—ಸೋಮವಾರವೇ ತೆಗೆದುಕೊಳ್ಳೋಣ. ಇದರಲ್ಲಿರುವ ಪ್ರಾವಿಶನ್ ಬಗ್ಗೆ ನಿನುಗೆ ಗೊತ್ತಿರಬಹುದು. ಎಲ್ಲರಿಗೂ ಇದು ಗೊತ್ತಿದೆ ಎಂದು ಅರ್ಥವಾಗುತ್ತದೆಯೆ ?

ಶ್ರೀ ಆರ್. ಎಲ್. ಜಾಲಪ್ಪ.---ನನ್ನಿಂದ ಈ ತಪ್ಪು ಆಗಿದೆ. ನಾನು ಇದು ನಾಳುರಲ್ ಕೋರ್ಸ್ ನಲ್ಲಿ ಇದು ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೆ. ಈಗ ಇದು ಗೊತ್ತಾಗಿದೆ. ಪಯುವಿಟ್ಟು ಕ್ಷಮಿಸಬೇಕು.

ಶ್ರೀ ಬಿ. ಸ್ವಾಮಿರಾವ್.---ಇದನ್ನು ಕನ್ನಡದಲ್ಲಿ ಕಳಿಸಿಲ್ಲ. ಇಂಗ್ಲೀಷ್‌ನಲ್ಲಿ ಕಳಿಸಿದ್ದಾರೆ. ನನಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು.---ಕನ್ನಡದಲ್ಲಿ ತಿದ್ದುಪಡಿಯನ್ನು ತಂದರೆ ಏತಿ ಅಂದರೆ ಪ್ರೇತಿ ಆಗಿಬಿಡುತ್ತದೆ.

(ಕೆಲವು ಸದಸ್ಯರಿಂದ ಇದನ್ನು ಸೋಮವಾರ ತೆಗೆದುಕೊಳ್ಳಬೇಕೆಂದು ಆಗ್ರಹ)

ಅಧ್ಯಕ್ಷರು.---ಮಾನ್ಯ ಮಂತ್ರಿಗಳೇ ನನ್ನಿಂದ ಅಪರಾಧವಾಗಿದೆಯೆಂದು ಹೇಳಿದ್ದಾರೆ. ಇನ್ನೇನು ಮಾಡೋಣ ಸ್ವಾಮಿ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.---ಮಾನ್ಯ ಮಂತ್ರಿಗಳು ಅವಕಾಶ ಕೊಟ್ಟರೆ ಒಂದು ಮಾತು. ಇದು ಬಹಳ ಮುಖ್ಯವಾದ ವಿಷಯ ಇದೆ. ಇದು ಕೆ. ಎಚ್. ಪಟೇಲರು ಕೊಟ್ಟಿರುವ ವರದಿ. ಇದರ ಬಗ್ಗೆ ಕಾಲಾವಕಾಶ ಕೊಟ್ಟು ಒಂದು ದಿವಸ ಚರ್ಚೆ ಮಾಡುವುದು ಸೂಕ್ತ. ಬೇಕಾದರೆ ಸೋಮವಾರ ಬೆಳ್ಳಿಗ್ಗೆ ಇಲ್ಲಿ ಸಭೆಸೇರಿ ಮಧ್ಯಾಹ್ನವೇ ಮೇಲ್ಮನೆಗೆ ಹೋಗುವ ಹಾಗೆ ಮಾಡೋಣ. ಆದರೆ ವಿಷಯ ತಿಳಿದುಕೊಂಡರೂ ಚರ್ಚೆ ಮಾಡದೆ ತಾವು ಕ್ಷಮಾಪಣೆ ಕೇಳಿದ್ದಕ್ಕೆ ತಮ್ಮನ್ನು ಕ್ಷಮಿಸಿದ್ದೇವೆ ಎಂದು ಒಪ್ಪಿಕೊಂಡು ಬಿಟ್ಟರೆ ಏನು ಪ್ರಯೋಜನ ? ನಿಮ್ಮನ್ನು ಕ್ಷಮಿಸಿದ್ದೇವೆ ಎಂದು ನಾವು ಹೋಗಬೇಕು ಆಷ್ಟೆ. ಇದನ್ನು ಚರ್ಚಿಸಲು ಕಾಲಾವಕಾಶ ಕೊಡಬೇಕು ಎನ್ನುವುದೇ ನನ್ನ ಪ್ರಾರ್ಥನೆ.

ಡಾ|| ವಿ. ಎಸ್. ಆಚಾರ್ಯ.---ಬೆಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾವು ಒಪ್ಪಿಕೊಂಡಿದ್ದು ಹೌದು. ರಾತ್ರಿ ಕಳಿಸಿದ್ದ ಲಕೋಟೆಯಲ್ಲಿ ಇದು ಇರಲಿಲ್ಲ. ಸಾಕಷ್ಟು ದೂರಗಾಮಿ ಪರಿಣಾಮ ಬೀರ ತಕ್ಕಂಥ ತಿದ್ದುಪಡಿ ಇದಾಗಿದೆ. ಈವತ್ತು ಇದು ಪಾಸ್ ಆಗಬೇಕೆಂದು ನಿನ್ನೆ ಹೇಳಿದ್ದರು. ಇದನ್ನು ಒಪ್ಪಿಕೊಂಡು ನಿನ್ನೆ ರಾತ್ರಿ ಇದಕ್ಕಾಗಿ ಬಹಳ ಹುಡುಕಾಡಬೇಕಾಯಿತು. ಈ ರೀತಿ ಮಾಡಬಹುದು ಎಂಬು ನನ್ನ ಸಲಹೆ. ಏನೆಂದರೆ ಸೋಮವಾರ ಹನ್ನೊಂದು ಗಂಟೆಗೆ ಬದಲು ಹತ್ತು ಗಂಟೆಗೇ ಸೇರೋಣ. ಮಧ್ಯಾಹ್ನದ ಮೇಲೆ ಇದನ್ನು ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್ ರಂಗನಾಥ್.---ಮಾನ್ಯ ಮಂತ್ರಿಗಳು ತಂದಿರುವುದರಲ್ಲಿ ಸದುದ್ದೇಶ ಇದೆ. ಆದರೆ ಬಹಳ ದೂರದ ಪರಿಣಾಮ ಬೀರತಕ್ಕಂಥ ಕಾನೂನುಗಳು ಇವೆ. ಅದರಲ್ಲೂ ಕೂಡ ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದೀರಿ. ನಾನು ಆ ಪುಸ್ತಕವನ್ನು ಬಹಳ ಶ್ರಮಪಟ್ಟು ಹುಡುಕಿದೆ. ಮೊದಮೊದಲು ಏನೂ ಕಾಣದೆ ಇರುವ ಹಾಗೆ ಮಾಡಿದ್ದೀರಿ. ಆದರೆ ಬರುತ್ತಾ ಬರುತ್ತಾ ಕ್ಲಾಸ್ 20ರಲ್ಲಿ "ಸಜಾ" "ಫೈನ್" ಅಂತ ಇದೆ.

ಅಧ್ಯಕ್ಷರು.---ನೀವು ಚರ್ಚೆ ಪ್ರಾರಂಭ ಮಾಡಿಬಿಟ್ಟಿದ್ದೀರಿ.

ಶ್ರೀ ಕೆ. ಎಚ್. ರಂಗನಾಥ್.---ಸಾವಿರಗಟ್ಟಲೆ ಫೈನ್ ಅಂತ ಇದೆ. ತಾವು ನೋಡಿದಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.---ಕ್ಲಾಸ್ 20 ರಲ್ಲಿ ಏನು ತಂದಿದ್ದೇವೆ, ಅದು ಕೆ. ಎಚ್. ಪಾಟೀಲರ ಸಮಿತಿಯ ವರದಿಯಲ್ಲಿ ಇರುವುದೇ ಆಗಿದೆ. ಕ್ರಿಮಿನಲ್ ಪ್ರೊಸಿಜರ್ ಕೋರ್ಟ್‌ನಲ್ಲಿ ಏನಿಡೆ ಅಹರ ಪ್ರಕಾರವೇ ಇಂಟ್ರಡ್ಯೂಸ್ ಮಾಡಿದ್ದೇವೆ ವಿನಹ ಬೇರೇನೂ ಇಲ್ಲ. ತನುಗೆ ಚೆನ್ನಾಗಿ ಗೊತ್ತಿದೆ ಏಕೆಂದರೆ ತಾವು ಹಿಂದೆ ಸಹಕಾರ ರಂಗದಲ್ಲಿ ಮಂತ್ರಿಯಾಗಿದ್ದವರು. ಎಲ್ಲರ ಬಂಡವಾಳ ತನುಗೆ ಗೊತ್ತಿದೆ. ಇತ್ತೀಚೆಗೆ ಸಹಕಾರ ರಂಗ ಬೃಹಥಾಕಾರವಾಗಿ ಬೆಳೆದಿದೆ. ಜೊತೆಗೆ ಸಹಕಾರದ ಮೇಲೆ ಸಮಾಜದಲ್ಲಿ ನಂಬಿಕೆ ಹೋಗುತ್ತಿದೆ.

ಅಧ್ಯಕ್ಷರು.---ಈ ಒಂದು ನಿರ್ಣಯಕ್ಕೆ ಬರೋಣ. ಈಗ ಮಂತ್ರಿಗಳು ಎಕ್ಸ್‌ಪ್ಲೇನ್ ಮಾಡಿಬಿಡಲಿ.

ಶ್ರೀ ಆರ್. ಎಲ್. ಜಾಲಪ್ಪ.---ಇವತ್ತು ಏನಾಗಿದೆ ಎಂದರೆ ಇದು ಬಹಳ ಮಹತ್ವವುಳ್ಳ ವಿಷಯ.

The Karnataka Co-operative Societies (Amendment) Bill, 1984
Motion to consider

SRI R. L JALAPPA.---Sri, I beg to move ;

"That the Karnataka Co-operative Societies (Amendment) Bill 1984 be taken into consideration".

**The question was proposed